ಸಂಘದವರು ಎಂದು ಆಗಲಿ, ತಮಿಳರು ಎಂದು ಆಗಲಿ, ಕನ್ನಡಿಗರು ಎಂದು ಆಗಲಿ ಪೋಲೀಸರು ಹೊಡೆದಿಲ್ಲ. ಯಾರು ಅಪರಾಧವನ್ನು ಮಾಡುವ ಸಂದರ್ಭದಲ್ಲಿ ಸಿಕ್ಕಿಬಿದ್ದಿದ್ದಾರೆ, ಅಂಥವರನ್ನು ಮಾತ್ರ ಪೋಲೀಸರು ಹೊಡೆದಿದ್ದಾರೆ. ಇಂಥಾ 67 ಜನರನ್ನು ಹಿಡಿದು ಅವರ ಮೇಲೆ ಕ್ರಿಮಿನಲ್ ಕೇಸನ್ನು ಹಾಕಿದ್ದಾರೆ. ಅದೇ ರೀತಿ ತಮಿಳರ ಮೇಲೂ ಕೇಸು ಹಾಕಿದ್ದಾರೆ. ನಿನ್ನೆ ಬೆಳಿಗ್ಗೆ ಕೂಡ ತಮಿಳು ಮಾತನಾಡತಕ್ಕ ಸುಮಾರು 15-20 ಜನರು ನನ್ನ ಹತ್ತಿರ ಬಂದು ತಮ್ಮ ಕಾಲಿಗೆ ಏಟು ಬಿದ್ದಿದೆ ಎಂಬುದನ್ನು ತೋರಿಸಿದರು. ಆದರೆ ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ. ಇಂಥ ಸಂದರ್ಭಗಳಲ್ಲಿ ನಾವು ಎಷ್ಟೇ ಪ್ರಯತ್ನ ಮಾಡಿದರೂ ಕೆಲವು ಹೊಡೆತಗಳು ಬೀಳುವುದು, ಅರೆಸ್ಟ್ ಮಾಡುವುದು ಮುಂತಾದುವನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ.

5. ಗಮನ ಸೆಳೆಯುವ ಸೂಚನೆ

ವಿಷಯ : ಕುಂದಾಪುರದಲ್ಲಿ ಅಣ್ಣು ಕಾರ್ವೆಯವರ ಕೊಲೆಗೆ ಕಾರಣರಾದವರ ಮೇಲೆ ಆಪಾದನಾ ಪಟ್ಟಿ ಸಲ್ಲಿಸುವಲ್ಲಿ ವಿಫಲರಾಗಿರುವ ಬಗ್ಗೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).— ಮಾನ್ಯ ಅಧ್ಯಕ್ಷರೆ, 83ನೇ ಜುಲೈ 27ರಂದು ಕುಂದಾಪುರ ಟೌನ್ ನಿವಾಸಿಯಾದ ಶ್ರೀ ಅಣ್ಣು ಕಾರ್ವೆಯವರ ಕೊಲೆಗೆ ಸಂಬಂಧಪಟ್ಟ ತಪ್ಪಿತಸ್ಥರ ವಿರುದ್ಧ ಆಪಾದನಾ ಪಟ್ಟಿಯನ್ನು ಆರಕ್ಷಕರು ಸಲ್ಲಿಸುವಲ್ಲಿ ವಿಫಲವಾಗಿರುವ ಬಗ್ಗೆ ಮಾನ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇವೆ.

ಶ್ರೀ ರಮೇಶಚಂದಪ್ಪ ಜಿಗಜಿಣಗಿ (ಗೃಹಾಡಳಿತ ರಾಜ್ಯ ಮಂತ್ರಿಯವರು).—ಅಧ್ಯಕ್ಷರೆ, ಕುಂದಾಪುರ ನಗರದ ಶ್ರೀ ಕೆ. ಅಣ್ಣು ಕಾರ್ವಿ, ವಯಸ್ಸು 32 ಇವರನ್ನು ದಿನಾಂಕ : 23-7-83ರಂದು ಕಳವಿನ ಪ್ರಕರಣದಲ್ಲಿ ಪೋಲೀಸರು ಬಂಧಿಸಿದ್ದರೆಂದೂ ಕಳುವಾದ ಸಾಮಾನುಗಳಲ್ಲಿ ಕೆಲವನ್ನು ಅವರಿಂದ ವಶಪಡಿಸಿಕೊಳ್ಳಲಾಗಿತ್ತೆಂದೂ ಮತ್ತು ಅವರನ್ನು ಅದೇ ದಿವಸ ಜುಡಿಷಿಯಲ್ ಮ್ಯಾಜಿಸ್ಟ್ರೇಟರ ಮುಂದೆ ಹಾಜರ್ ಮಾಡಿ 5 ದಿವಸಗಳ ಕಾಲ ನ್ಯಾಯಿಕ ಅಭಿರಕ್ಷೆಯಲ್ಲಿ ತೆಗೆದುಕೊಳ್ಳಲಾಗಿತ್ತೆಂದೂ ವರದಿಯಾಗಿತ್ತು. ಅವರನ್ನು 25-7-83 ರಂದು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತೆಂದೂ ಅದೇ ದಿವಸ ಕುಂದಾಪುರ ಆದರ್ಶ ನರ್ಸಿಂಗ್ ಹೋಂ ಎಂಬ ಖಾಸಗಿ ಚಿಕಿತ್ಸಾಲಯದಲ್ಲಿ ಅವರಿಗೆ ಚಿಕಿತ್ಸೆ ದಾಖಲು ಮಾಡಲಾಗಿತ್ತೆಂದೂ ಮತ್ತು 28-7-83 ಬೆಳಿಗ್ಗೆ 8 ಘಂಟೆಗೆ ಅವರು ಆ ಚಿಕಿತ್ಸಾಲಯದಲ್ಲಿ ತೀರಿಕೊಂಡರೆಂದು ಸಹ ವರದಿಯಾಗಿತ್ತು. ಈ ಪ್ರಕರಣದಲ್ಲಿ ಪೋಲೀಸರು ಅವರನ್ನು ಮೇಲೆ ಹೇಳಿದ 23-7-83 ರಂದು ದಸ್ತಗಿರಿ ಮಾಡಿದ್ದಿಲ್ಲವೆಂದೂ ನಿಜವಾಗಿಯೂ ಅವರನ್ನು 12-7-83 ರಂದು ದಸ್ತಗಿರಿ ಮಾಡಲಾಗಿತ್ತೆಂದೂ ಮತ್ತು ಆನಂತರ ಕೆಲವು ದಿವಸ ಅವರು ಪತ್ತೆ ಇರಲಿಲ್ಲವೆಂದೂ ಕೆಲವರು ಆಪಾದಿಸಿದ್ದರು. ಅದಲ್ಲದೆ ಪೋಲೀಸರ ಹಿಂಸೆಯಿಂದ ಅವರು ಮೃತಪಟ್ಟಿದ್ದಾರೆಂದು ಸಹ ಆಪಾದನೆಗಳನ್ನು ಮಾಡಿದ್ದರು. ಅವರ ಮರಣಾನಂತರ ಶವ ಪರೀಕ್ಷೆಯನ್ನು ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ಮಾಡಲಾಗಿತ್ತು. ಈ ಶವ ಪರೀಕ್ಷೆಯಲ್ಲಿ ಅವರ ಶರೀರದ ಮೇಲೆ ಗಾಯಗಳು ಮತ್ತು ಮೂಗೇಟುಗಳು ಕಂಡು ಬಂದವು. ಅವರ ವಿಸೆರಾವನ್ನು ಮತ್ತು ಪುಪ್ಪಸ, ಯಕೃತ್, ಮೂತ್ರಪಿಂಡ, ಹೊಟ್ಟೆ, ಹೃದಯದ ಭಾಗವನ್ನು ವೈದ್ಯರ ಪರೀಕ್ಷೆಗಾಗಿ ಕಳುಹಿಸಲಾಗಿತ್ತು.

2. ಶ್ರೀ ಅಣ್ಣು ಕಾರ್ವಿ ಮರಣದ ವಿಷಯದಲ್ಲಿ ಜವಾಬ್ದಾರಿ ವ್ಯಕ್ತಿಗಳಿಂದ ಮೇಲೆ ಹೇಳಿದಂತಹ ಆಪಾದನೆಗಳನ್ನು ಮಾಡಲ್ಪಟ್ಟಿದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ದಂಡ ಪ್ರಕ್ರಿಯ ಸಂಹಿತೆಯ ಕಲಂ 174 ಮತ್ತು 176ರ ಪ್ರಕಾರ ವಿಚಾರಣೆ ಮಾಡಿ ವರದಿ ಕೊಡಲು ಕೇಳಲಾಯಿತು. ಅದರಂತೆ ಜಿಲ್ಲಾ ಮ್ಯಾಜಿಸ್ಟ್ರೇಟರು ಕೂಲಂಕುಷವಾಗಿ ವಿಚಾರಣೆ ನಡೆಸಿ, ವೈದ್ಯರ ವರದಿಯನ್ನು ಸಮಗ್ರವಾಗಿ ಪರಿಗಣಿಸಿ ತಮ್ಮ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದರು. ಅವರ ವರದಿ ಪ್ರಕಾರ ಪೋಲೀಸರು ಅಣ್ಣು ಕಾರ್ವಿಯನ್ನು ಅಕ್ರಮವಾಗಿ ತಮ್ಮ ವಶದಲ್ಲಿ ಇಟ್ಟು ಅವರನ್ನು ಯಾತನೆಗೆ ಒಳಪಡಿಸಿದ್ದರಿಂದ ಆತನ ಮರಣ ಉಂಟಾಗಿರುವ ಸಾಧ್ಯತೆಗಳು ಇವೆಯೆಂದು ತಮ್ಮ ವರದಿಯಲ್ಲಿ ಅಭಿಪ್ರಾಯ ಪಟ್ಟಿದ್ದಾರೆ ಈ ವರದಿಯನ್ನು ಸರ್ಕಾರವು ಸಮಗ್ರವಾಗಿ ಪರಿಶೀಲಿಸಿ ಜಿಲ್ಲಾ ಮ್ಯಾಜಿಸ್ಟ್ರೇಟರ ಅಭಿಪ್ರಾಯವನ್ನು ಸ್ವೀಕರಿಸಿ, ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳ ಮೇಲೆ ಕಾನೂನು ಪ್ರಕಾರ ಮುಂದಿನ ಕ್ರಮ ಜರುಗಿಸುವಂತೆ ಮತ್ತು ಇಲಾಖಾ ತನಿಖೆಯನ್ನು ನಡೆಸುವಂತೆ ರಾಜ್ಯದ ನಿರ್ದೇಶಕ ಮತ್ತು ಆರಕ್ಷಕ ಮಹಾ ನಿರೀಕ್ಷಕರವರಿಗೆ ಆದೇಶ ಇತ್ತಿದೆ. ಈ ಆದೇಶದ ಮೇರೆಗೆ ರಾಜ್ಯದ ನಿರ್ದೇಶಕ ಮತ್ತು ಆರಕ್ಷಕ ಮಹಾ ನಿರೀಕ್ಷಕರು ಸಂಬಂಧಪಟ್ಟ ಸರ್ಕಲ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್ ಮತ್ತು ಮೂವರು ಪೋಲೀಸ್ ಸಿಬ್ಬಂದಿಯವರ ಮೇಲೆ ಭಾರತೀಯ ದಂಡ ಸಂಹಿತೆ ಕಲಂ 348, 330, 324 ಮತ್ತು 192 ಅನ್ವಯ ಕುಂದಾಪುರ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ನಂ. 6:84 ನ್ನೊಂದಾಯಿಸಿದ್ದಾರೆ. ಈ ಅಧಿಕಾರಿಗಳ ಮೇಲೆ ಇಲಾಖಾ ತನಿಖೆಯೂ ನಡೆಯುತ್ತಿದೆ.

ತನಿಖೆಯನ್ನು ರಾಜ್ಯದ ಗುಪ್ತ ದಳ ಪೋಲೀಸರಿಗೆ ವಹಿಸಿ ಕೊಡಲಾಗಿದೆ ಮತ್ತು ಅವರಿಂದ ತನಿಖೆ ನಡೆಯುತ್ತಿದೆ. ಆಣ್ಣಾಕಾರ್ವಿಯವರ ತಾಯಿಯವರಾದ ಶ್ರೀಮತಿ ಲಕ್ಷ್ಮಿ ಇವರಿಗೆ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ 7,500.00 ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ, ಕುಂದಾಪುರ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಏನು ಹೇಳಿಕೆಯನ್ನು ಕೊಟ್ಟಿರುತ್ತಾರೆ, ಈ ಹೇಳಿಕೆಯನ್ನು ನೋಡಿದರೆ, ಪೋಲೀಸ್‌ನವರು ಏನು ಹೇಳಿಕೆಯನ್ನು ಕೊಟ್ಟಿದ್ದಾರೋ ಅದೇ ಹೇಳಿಕೆಯನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆಂದು ಕಾಣುತ್ತದೆ. ಏತಕ್ಕೆಂದರೆ ಜಿಲ್ಲಾ ಮ್ಯಾಜಿಸ್ಟ್ರೇಟರು ಶ್ರೀ ಆಣ್ಣಾಕಾರ್ವಿ ಪ್ರಕರಣವನ್ನು ತನಿಖೆ ಮಾಡಿದಂಥ ತನಿಖೆಯ ವರದಿಯನ್ನು ಕೊಟ್ಟಿರುತ್ತಾರೆ. ಸರ್ಕಾರದವರು ಆ ವರದಿಯನ್ನು ಸದನದ ಮುಂದೆ ಇಡಲಿಕ್ಕೆ ಇಲ್ಲಿಯವರೆಗೆ ಪ್ರಯತ್ನ ಮಾಡಲಿಲ್ಲ. ಶ್ರೀ ಆಣ್ಣಾಕಾರ್ವಿಯವರ ಮರಣ ಸಂಭವಿಸಿ ಇಂದಿಗೆ ಆರು ತಿಂಗಳಿಗೂ ಹೆಚ್ಚು ಸಮಯವಾಯಿತು. ಇದರ ವರದಿ ಸರ್ಕಾರಕ್ಕೆ ಬಂದು ಮೂರು ತಿಂಗಳುಗಳಾಯಿತು. ಆ ವರದಿಯನ್ನು ಸದನದಲ್ಲಿ ಮಂಡಿಸಬಹುದಾಗಿತ್ತು. ಎರಡನೆಯದಾಗಿ ಅವರನ್ನು ಅಕ್ರಮವಾಗಿ ತಮ್ಮ ವಶದಲ್ಲಿ ಇಟ್ಟುಕೊಂಡು ಅವರನ್ನು ಯಾತನೆಗೆ ಒಳಪಡಿಸಿದ್ದರಿಂದ ಆತನ ಮರಣ ಉಂಟಾಗಿದೆಯೆಂದು ಹೇಳಿದರೂ, ಇದಕ್ಕೆ ಕಾರಣರಾದ ಪೋಲೀಸ್‌ನವರ ಮೇಲೆ ಕ್ರಮ ತೆಗೆದುಕೊಳ್ಳದೆ ಇರತಕ್ಕಂಥದ್ದನ್ನು ಜನತೆ ಯಾಗಲಿ ಅಥವಾ ಸದನವಾಗಲಿ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳುತ್ತಿದ್ದೇನೆ. ಇದಲ್ಲದೇ ಇದೇ ಸಂದರ್ಭದಲ್ಲಿ ಭಾರತೀಯ ದಂಡ ಸಂಹಿತೆ ಕಲಂ 348, 330, 324 ಮತ್ತು 192 ಎಂದು ಏನೇನು ಹೇಳಿದ್ದೀರಿ. ಇದು ಯಾವುದಕ್ಕೂ ಜನ ಬೆಲೆಯನ್ನು ಕೊಡುವುದಿಲ್ಲ. ನಿಷ್ಪಕ್ಷಪಾತವಾದ ತನಿಖೆ ನಡೆಯಬೇಕೆಂದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಗಮನವಿಟ್ಟು ನಿರಂತರವಾಗಿ ತನಿಖೆಯನ್ನು ನಡೆಸಬೇಕು. ಏತಕ್ಕೆಂದರೆ ಈ ಬಗ್ಗೆ ಜಿಲ್ಲಾ ಮ್ಯಾಜಿಸ್ಟ್ರೇಟ್‌ರವರಿಂದ ಮತ್ತು ಡಾಕ್ಟರ್‌ರವರಿಂದ ವರದಿ ಬಂದಿರುತ್ತದೆ. ವರದಿಯಲ್ಲಿ ಗಾಯಗಳು ಮತ್ತು ಮೂಗೇಟುಗಳು ಬಿದ್ದಿದ್ದವು ಎಂದು ವರದಿಯನ್ನು ಕೊಟ್ಟಿದ್ದಾರೆ. ಹಾಗೆಯೇ ಜಿಲ್ಲಾಧಿಕಾರಿಗಳು ವಿವರಿಸಿರತಕ್ಕಂಥ ವರದಿಯನ್ನೂ ಕೂಡ ಸಭೆಯ ಮುಂದೆ ಇಡಬೇಕಾದ ಅವಶ್ಯಕತೆ ಇಲ್ಲವೆಂದು ಹೇಳುತ್ತೀರಿ. ನಾನು ಈ ಬಗ್ಗೆ ಹೇಳುವುದೇನೆಂದರೆ ಮುಖ್ಯವಾಗಿ ಪೋಲೀಸ್ ಅಧಿಕಾರಿಗಳನ್ನು ಸ್ವಲ್ಪ ಸುಧಾರಣೆ ಮಾಡಬೇಕು, ಅವರನ್ನು ಸುಧಾರಣೆಯ ಸೆಲ್‌ಗೆ ಕಳುಹಿಸಿ ಬದಲಾವಣೆ ಮಾಡತಕ್ಕಂಥದ್ದು ಬಹಳ ಅವಶ್ಯಕತೆ ಇರುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮುಖ್ಯವಾಗಿ ಇಂಥ ನಿರಪರಾಧಿಗಳಮೇಲೆಯಾಗಲಿ ಯಾವ ರೀತಿಯಾದ ಚಿತ್ರಹಿಂಸೆಯನ್ನು ನಡೆಸಬಾರದೆಂದು ಹೇಳುತ್ತಾ ಈ ಬಗ್ಗೆ ತಾವು ತೆಗೆದುಕೊಂಡ ನಿರ್ಧಾರ ಮತ್ತು ಕಾರ್ಯಕ್ರಮ ಏನು ಎಂಬುದನ್ನು ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ ಚಂದಪ್ಪ ಜಿಗಜಿಣಗಿ.—ಮಾನ್ಯ ಸಭಾಧ್ಯಕ್ಷರೇ, ಈ ಒಂದು ಹೇಳಿಕೆಯನ್ನು ಸಭೆಯ ಮುಂದೆ ಇಟ್ಟಿದ್ದೇನೆ. ಆದರೆ ಯಾವ ಒಬ್ಬ ಅಧಿಕಾರಿಯಾಗಲಿ, ನನಗೆ ಸಂಬಂಧಪಟ್ಟಿರುವ ಈ ಇಲಾಖೆಯಲ್ಲಿ ತಪ್ಪು ಮಾಡಿದ್ದರೆ ಅದನ್ನು ಮರೆಮಾಚಿ ಅವರಿಗೆ ರಕ್ಷಣೆಯನ್ನು ಕೊಡಬೇಕು ಎನ್ನುವ ಉದ್ದೇಶ ನನಗಾಗಲಿ, ಅಥವಾ ಸರ್ಕಾರಕ್ಕಾಗಲಿ ಇಲ್ಲ. ಈ ಬಗ್ಗೆ ಇಲಾಖಾ ತನಿಖೆ ಮಾಡಿಸುತ್ತಿದ್ದೇನೆ. ಸಿ ಓ ಡಿ. ಎನ್‌ಕ್ವೈರಿ ನಡೆಯುತ್ತಿದೆ. ಎನ್‌ಕ್ವೈರಿ ರಿಪೋರ್ಟ್ ಬಂದ ಮೇಲೆ ಯಾರು ನಿಜವಾಗಿ ತಪ್ಪಿತಸ್ಥರಿರುತ್ತಾರೆ ಅವರ ಮೇಲೆ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುವ ಭರವಸೆಯನ್ನು ಕೊಡುತ್ತೇನೆ.

ಡಾ. ವಿ. ಎಸ್. ಆಚಾರ್ಯ.—ನಮ್ಮ ಜಿಲ್ಲೆಯಲ್ಲಿ ಇದು ಒಂದು ಸಾರ್ವಜನಿಕವಾದ ಪ್ರಶ್ನೆಯಾಗಿರುತ್ತದೆ.

ಉಪಾಧ್ಯಕ್ಷರು.—ಗಮನ ಸೆಳೆಯುವ ಸೂಚನೆಯನ್ನು ಯಾರು ಕಳುಹಿಸಿರುತ್ತಾರೋ ಅವರು ಮಾತ್ರ ಮತ್ತೆ ಸ್ಪಷ್ಟೀಕರಣ ಕೇಳಬಹುದು. ಆದ್ದರಿಂದ ತಾವು ದಯವಿಟ್ಟು ಕುಳಿತುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ತಾವೇ ನಿಯಮಗಳನ್ನು ಮಾಡಿರುತ್ತೀರಿ. ಅದರಂತೆ ಹೋಗೋಣ.

(ಗೊಂದಲ)

ಡಾ. ವಿ. ಎಸ್. ಆಚಾರ್ಯ.—ನಮ್ಮ ಸದಸ್ಯರು ಒಂದು ಮುಖ್ಯವಾದ ಅಂಶವನ್ನು ಎತ್ತಿ ಹೇಳಿದ್ದಾರೆ. ಅದರ ಬಗ್ಗೆ ಕೆಲವೊಂದು ಮುಖ್ಯವಾದ ವಿಷಯಗಳನ್ನು ಹೇಳಬೇಕಾಗಿರುತ್ತದೆ. ಆದ್ದರಿಂದ ನನಗೆ ಮಾತನಾಡಲು ಅವಕಾಶವನ್ನು ಕೊಡಿ

ಉಪಾಧ್ಯಕ್ಷರು.—ಮಾನ್ಯ ಸದಸ್ಯರಾದ ಪ್ರತಾಪ್‌ಚಂದ್ರ ಶೆಟ್ಟಿಯವರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾ ಇಲಾಖಾ ತನಿಖೆ ನಡೆದು ವರದಿ ಬಂದ ಮೇಲೆ ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ.— ಜಿಲ್ಲಾಧಿಕಾರಿಗಳ ವರದಿ ಏನು ಬಂದಿರುತ್ತದೆ; ಅದನ್ನು ದಯವಿಟ್ಟು ಸಭೆಯ ಮುಂದೆ ಇಡಬೇಕೆಂದು ಹೇಳುತ್ತೇನೆ.

(ಗೊಂದಲ)

ಡಾ. ವಿ. ಎಸ್. ಆಚಾರ್ಯ.—ಮಾನ್ಯ ಸದಸ್ಯರು ಏನು ಪ್ರಶ್ನೆ ಎತ್ತಿದ್ದಾರೆ ಎಂದರೆ ಜಿಲ್ಲಾಧಿಕಾರಿಗಳು ವರದಿಯನ್ನು ಸಲ್ಲಿಸಿದ್ದಾರೆ. ಅವರು ವರದಿಯನ್ನು ಸಲ್ಲಿಸಿ ಇಷ್ಟು ದಿವಸಗಳಾದರೂ, ಆರಕ್ಷಕ ಮತ್ತು ಮಹಾನಿರೀಕ್ಷಕರವರಿಗೆ ತನಿಖೆಗೆ ನಿರ್ದೇಶನ ಕೊಟ್ಟಿದ್ದರೂ ಸಂಬಂಧಪಟ್ಟವರ ಮೇಲೆ ಯಾವ ಕ್ರಮವನ್ನೂ ಇನ್ನೂ ತೆಗೆದುಕೊಂಡಿಲ್ಲ.

ಉಪಾಧ್ಯಕ್ಷರು.— ಅಧಿಕಾರಿಗಳಿಂದ ಇನ್ನೂ ರಿಪೋರ್ಟ್ ಬಂದಿಲ್ಲ. ಬಂದ ತಕ್ಷಣ ಕ್ರಮ ತೆಗೆದು ಕೊಳ್ಳುತ್ತೇವೆಂದು ಮಾನ್ಯ ಸಚಿವರು ಹೇಳಿರುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಇನ್ನು ಏನು ಆಗಬೇಕೋ ನನಗೆ ಅರ್ಥವಾಗುತ್ತಿಲ್ಲ; ಈ ಘಟನೆ ಲಕ್ಷಕ್ಕೆ ಬಂದ ತಕ್ಷಣವೇ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ತನಿಖೆಯನ್ನು ಮಾಡಿಸಿದ್ದು ಆಯಿತು. ಅವರಿಂದ ಬಂದ ಎನ್‌ಕ್ವಯರಿ ರಿಪೋರ್ಟ್ ಆಧಾರದ ಮೇಲೆ, ಆ ಇಬ್ಬರು ಆಫೀಸರ್‌ಗಳನ್ನು ಅಲ್ಲಿಂದ ವರ್ಗ ಮಾಡಿದ್ದಾಗಿರುತ್ತದೆ. ಈಗ ಸಿ.ಓ.ಡಿ. ಎನ್‌ಕ್ವಯರಿ ನಡೆಯುತ್ತಾ ಇದೆ ಸಿ.ಓ.ಡಿ ಎನ್‌ಕ್ವೆಯರಿಯಲ್ಲಿ ನಿಜವಾಗಿಯೂ ಪ್ರೈಮಫೇಸಿ ಕೇಸ್ ಇದೆ ಎಂದು ಗೊತ್ತಾದ ಮೇಲೆ ಅವರನ್ನು ಸಸ್ಪೆಂಡ್ ಮಾಡಬೇಕೋ, ಪ್ರಾಸಿಕ್ಯೂಟ್ ಮಾಡಬೇಕೋ ಅಥವಾ ಬೇರೆ ಏನು ಮಾಡಬೇಕಾಗುತ್ತದೋ ಅದನ್ನೆಲ್ಲ ಮಾಡಬೇಕಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು.—ಆ ಪೋಲೀಸ್ ಅಧಿಕಾರಿಗಳು ಇನ್ನೂ ಅಲ್ಲೇ ಇದ್ದಾರೆ

ಶ್ರೀ ರಾಮಕೃಷ್ಣ ಹೆಗಡೆ.—ಹಿಂದೆ ಈ ವಿಚಾರ ಇಲ್ಲಿ ಪ್ರಸ್ತಾಪಕ್ಕೆ ಬಂದಾಗ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಏನೇ ಹೇಳಿರಲಿ, ಅವರು ಕೊಟ್ಟ ರಿಪೋರ್ಟನ್ನು ಇಲ್ಲಿ ಇಡಲಿಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ಕಮಿಷನ್ ಆಫ್ ಎನ್‌ಕ್ವಯರಿ ಕೆಳಗೆ ನಡೆಯುವುದು ಎನ್‌ಕ್ವಯರಿ ಅಲ್ಲ. ಅವರ ಅಭಿಪ್ರಾಯದಲ್ಲಿ ಹೇಳತಕ್ಕಂಥದ್ದು ಮೊದಲೇ ಹೇಳಿದ್ದಾರೆ. ಮಂತ್ರಿಗಳು ಏನು ಹೇಳಿದ್ದಾರೆ ಎನ್ನುವುದು ನನಗೆ ಸರಿಯಾಗಿ ನೆನಪು ಇಲ್ಲ. ಅವರನ್ನು ಯಾವಾಗ ದಸ್ತಗಿರಿ ಮಾಡಿದ್ದು, ಅದಕ್ಕಿಂತ ಮೊದಲು ಮಾಡಿದ್ದರು ಎಂದು ಕೆಲವರ ಆಪಾದನೆ ಇದೆ.

ಇದು ಗೊತ್ತಾದ ಮೇಲೆ ಶವ ಪರೀಕ್ಷೆಯನ್ನು ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ಮಾಡಲಾಯಿತು. ಆ ಆಸ್ಪತ್ರೆಯ ವರದಿ ಪ್ರಕಾರ ಅವರ ಶರೀರದ ಮೇಲೆ ಗಾಯಗಳು ಮತ್ತು ಮೂಗೇಟುಗಳು ಇವೆ ಎಂದು ಕಂಡು ಬಂದ ಕಾರಣದಿಂದ ಈಗ ಸಿ.ಓ.ಡಿ. ತನಿಖೆ ನಡೆಯುತ್ತಿದೆ. ಇದಕ್ಕಿಂತ ಇನ್ನೇನು ಬೇಕು ?

ಡಾ. ವಿ.ಎಸ್. ಆಚಾರ್ಯ.— ಈ ಬಗ್ಗೆ ಸಂಬಂಧಪಟ್ಟವರ ಮೇಲೆ ಕೂಡಲೆ ಕ್ರಮ ತೆಗೆದು ಕೊಳ್ಳಬೇಕೆಂಬುದೇ ನಮ್ಮ ಮನವಿ.

ಶ್ರೀ ಪ್ರತಾಪಚಂದ್ರ ಶೆಟ್ಟಿ.— ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳು ಇನ್ನೂ ಅಲ್ಲಿಯೇ ಇದ್ದಾರೆ. ಅವರನ್ನು ಅಲ್ಲಿಂದ ವರ್ಗ ಮಾಡಿಲ್ಲ. ಇದು ಕಾಂಗ್ರೆಸ್(ಐ) ಪಕ್ಷದ ಕ್ಷೇತ್ರ ಎಂಬ ಕಾರಣದಿಂದ ಈ ರೀತಿ ಉತ್ತರ ಕೊಟ್ಟಿದ್ದಾರೆ. ಈ ಸರ್ಕಾರದ ಉತ್ತರವನ್ನು ನಾನು ಧಿಕ್ಕರಿಸುತ್ತೇನೆ ಮತ್ತು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದಂಥ ಶ್ರೀ ಪ್ರತಾಪಚಂದ್ರ ಶೆಟ್ಟಿ ಅವರು ಸಭಾತ್ಯಾಗ ಮಾಡಿದರು)

(ii) ನಂಜನಗೂಡಿನ ಕಬಿನಿ ನದಿಯ ಸ್ನಾನ ಘಟ್ಟದಲ್ಲಿ ನೀರು ಕಲುಷಿತಗೊಂಡು ಯಾತ್ರಿಕರಿಗೆ ಅನಾರೋಗ್ಯ ಉಂಟಾದ ಬಗ್ಗೆ

ಶ್ರೀ ಎಂ. ಮಹದೇವ್.— ಮಾನ್ಯ ಅಧ್ಯಕ್ಷರೇ, ನಂಜನಗೂಡಿನ ಕಬಿನಿ ನದಿಯ ಸ್ನಾನದ ಘಟ್ಟದಲ್ಲಿ ನೀರು ಕಲುಷಿತಗೊಂಡು ಯಾತ್ರಿಕರಿಗೆ ಅನಾರೋಗ್ಯವನ್ನುಂಟುಮಾಡುತ್ತಿರುವ ವಿಚಾರವನ್ನು ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.—

ಶ್ರೀ ವಿ.ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನನ್ನ ಹೇಳಿಕೆ ಈ ರೀತಿ ಇದೆ :—

There is a bathing ghat on Kapila River, near Nanjangud temple. The pilgrims use this bathing ghat. Due to stagnation of water, there is growth of weeds. In 1982, at the time of Jatra, the weeds were removed spending Rs. 588/- out of temple funds. Again in the year 1983, at the time of Jatra, the weed removal was taken up by spending a sum of Rs. 858/-. But, it has grown again. When the river flows fully, weeds get submerged and there would be no problem to pilgrims. But when the water recedes, weeds reappear. The temple authorities have, with an intention